**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಶ್ರೀಮತಿ ಯಲ್ಲವ್ವ ಬಸಪ್ಪ ನರ್ತಿ, ಹಿಂದಿನ ಅಧ್ಯಕ್ಷರು ಮತ್ತು ಶ್ರೀ ಇಸ್ಮಾಯಿಲ್‌ಸಾಬ್ ಎ. ರಾಜೇಖಿನವರ, ಹಿಂದಿನ ಸದಸ್ಯರು, ಶಿರೂರು ಗ್ರಾಮ ಪಂಚಾಯಿತಿ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ)(vi) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಅ.ಸ.ಪ.ಸಂ: Compt / Uplok / BGM – 9108 / 2017 / DRE-4, Dated 23.02.2018.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 120 ಗ್ರಾಪಂಕಾ 2018, ದಿನಾಂಕ: 06.03.2018.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಧಾರವಾಡ ಇವರ ಪತ್ರ ಸಂಖ್ಯೆ:ಧಾಜಿಪಂ/ಉಕಾ/ಸಿ–9/ಸಿಆರ್/2/ಲೋ.ಪ್ರ/2018–19/2736, ದಿನಾಂಕ: 10.01.2019.
4. ಸರ್ಕಾರದ ಆದೇಶ ಪತ್ರ ಸಂಖ್ಯೆ: ಗ್ರಾಅಪ 1135 ಗ್ರಾಪಂಅ 208, ದಿನಾಂಕ: 02.02.2019.
5. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 120 ಗ್ರಾಪಂಕಾ 2018, ದಿನಾಂಕ: 18.08.2020.
6. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಇವರ ಪತ್ರ ಸಂಖ್ಯೆ: ಪ್ರಾಆಬೆ: ಜಿಪಂ: 43(ಎ) :ಸಿಆರ್–13::2020–21, ದಿನಾಂಕ:18.03.2021.

***

ಶ್ರೀಮತಿ ಯಲ್ಲವ್ವ ಬಸಪ್ಪ ನರ್ತಿ, ಹಿಂದಿನ ಅಧ್ಯಕ್ಷರು ಮತ್ತು ಶ್ರೀ ಇಸ್ಮಾಯಿಲ್‌ಸಾಬ್ ಎ. ರಾಜೇಖಿನವರ, ಹಿಂದಿನ ಸದಸ್ಯರು, ಶಿರೂರು ಗ್ರಾಮ ಪಂಚಾಯಿತಿ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ತಮ್ಮ ಅಧಿಕಾರಾವಧಿಯಲ್ಲಿ ಕೆಲವೊಂದು ಆರೋಪಗಳನ್ನು ಎಸಗಿರುವುದಾಗಿ, ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಉಪಬಂಧಗಳನ್ವಯ ಕ್ರಮ ಕೈಗೊಳ್ಳುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಮಾನ್ಯ ಉಪಲೋಕಾಯುಕ್ತರವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ. ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನಂತೆ ಅಗತ್ಯ ಕ್ರಮ ಕೈಗೊಂಡು, ಕೈಗೊಂಡ ಕ್ರಮವನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಧಾರವಾಡ ರವರನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಕುಂದಗೋಳ ಇವರಿಂದ ವರದಿ ಪಡೆಯಲಾಗಿದ್ದು, ಸದರಿ ವರದಿಯಲ್ಲಿ ಮಾನ್ಯ ಉಪಲೋಕಾಯುಕ್ತರವರು ಆರೋಪಿಸಿರುವಂತೆ ಯಾವುದೇ ಲೋಪದೋಷಗಳು ಕಂಡು ಬಂದಿರುವುದಿಲ್ಲ ಹಾಗೂ ಕಾಮಗಾರಿಗಳು ಯೋಜನಾ ಮಾರ್ಗಸೂಚಿಯ ಪ್ರಕಾರ ಅನುಷ್ಠಾನ ಆಗಿರುವುದರಿಂದ ಯಾವುದೇ ಹಣ ವಸೂಲಾತಿಗೆ ಪ್ರಶ್ನೆ ಇರುವುದಿಲ್ಲ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಧಾರವಾಡ ರವರು ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಧಾರವಾಡ ರವರ ವರದಿಯಲ್ಲಿ ಚುನಾಯಿತ ಪ್ರತಿನಿಧಿಗಳಿಂದ ಯಾವುದೇ ಲೋಪದೋಷಗಳು ಆಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ ಮಾನ್ಯ ಉಪಲೋಕಾಯುಕ್ತರವರ ಶಿಫಾರಸ್ಸಿನಲ್ಲಿ ಚುನಾಯಿತ ಪ್ರತಿನಿಧಿಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕಾರ ಕ್ರಮ ತೆಗೆದುಕೊಳ್ಳಲು ತಿಳಿಸಿರುತ್ತಾರೆ. ಆದುದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ 43(ಎ), 48(4) ಮತ್ತು 48(5) ರಡಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರುಗಳು ಹಾಗೂ ಸದಸ್ಯರುಗಳ ಮೇಲಿನ ಆರೋಪಗಳಿಗೆ ವಿಚಾರಣೆ ನಡೆಸಲು ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಪ್ರಾದೇಶಿಕ ಆಯುಕ್ತರುಗಳಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದ್ದು, ಅದರನ್ವಯ ಸದರಿ

ಪ್ರಕರಣದ ಬಗ್ಗೆ ಮತ್ತೊಮ್ಮೆ ವಿಚಾರಣೆ ನಡೆಸಲು ತೀರ್ಮಾನಿಸಿ, ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ಪತ್ರದಲ್ಲಿ ಸದರಿ ಪ್ರಕರಣದ ವಿಚಾರಣೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಈ ಪ್ರಕರಣವನ್ನು ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ರವರಿಗೆ ವಹಿಸಲಾಗಿತ್ತು.

**ದೋಷಾರೋಪಣೆ:-**

" ಶ್ರೀ ಬಸವರಾಜ ಪರಸಪ್ಪ ಸರಸ್ವತಿ ರವರ ಜಮೀನಿನಲ್ಲಿ ಕೃಷಿಹೊಂಡ ಮತ್ತು ಬದು ನಿರ್ಮಾಣ ಕಾಮಗಾರಿ ಮಾಡದೆ ಬೋಗಸ್ ಬಿಲ್ ಮಾಡಿ ಹಣ ದುರುಪಯೋಗಪಡಿಸಿಕೊಂಡಿರುವ ಆರೋಪ."

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಂತೆ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಇವರು ಈ ಪ್ರಕರಣದ ವಿಚಾರಣೆ ನಡೆಸಿ, ವಿಚಾರಣೆ ಕಾಲಕ್ಕೆ ಹಾಜರಿದ್ದ ವಾದಿ ಹಾಗೂ ಪ್ರತಿವಾದಿಗಳ ಹೇಳಿಕೆಗಳನ್ನು ಹಾಗೂ ಲಭ್ಯವಿದ್ದ ದಾಖಲೆಗಳನ್ನು ಪರಿಶೀಲಿಸಿ, ಪ್ರಸ್ತಾಪಿತ ಹೊಂಡ / ಬದುವು ನಿರ್ಮಾಣ ಮಾಡುವ ಕಾಮಗಾರಿಯನ್ನು ದಾಖಲೆಗಳ ಪ್ರಕಾರ ಭೂಮಿ ಹೊಂದಿರುವ ಶ್ರೀ ಪರಸಪ್ಪ ಸರಸ್ವತಿ ಎಂಬುವವರ ಭೂಮಿಯಲ್ಲಿ ಮಾಡಲಾಗಿದೆ. ಪ್ರಕರಣದ ದೂರುದಾರನಾದ ಶ್ರೀ ಪರಸಪ್ಪ ಬಸಪ್ಪ ಸರಸ್ವತಿ ಇವರು ನಿಜವಾದ ಫಲಾನುಭವಿಯಾದ ಶ್ರೀ ಪರಸಪ್ಪ ಸರಸ್ವತಿ ಎಂಬುವವರ ಸಂಬಂಧಿಯಾಗಿದ್ದು, ಯಾವುದೇ ಭೂಮಿಯನ್ನು ಹೊಂದಿರುವುದಿಲ್ಲ. ಈ ಗೊಂದಲವು ಮಾನ್ಯ ಲೋಕಾಯುಕ್ತರವರಿಗೆ ಸ್ಪಷ್ಟವಾಗಿರುವುದಿಲ್ಲ ಎಂದು ಪ್ರಕರಣದ ವಿಚಾರಣೆ ಕಾಲಕ್ಕೆ ಹಾಜರಿದ್ದ ಆರೋಪಿ-2 (ಶ್ರೀ ಇಸ್ಮಾಯಿಲ್‌ಸಾಬ್ ಎ. ರಾಜೇಖನವರ, ಹಿಂದಿನ ಸದಸ್ಯರು) ಇವರು ಈ ನ್ಯಾಯಾಲಯಕ್ಕೆ ತಮ್ಮ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ಆರೋಪಿ-2 ರ ಹೇಳಿಕೆಗಳನ್ನು ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಧರ್ಮಣ್ಣ ಎ.ಕೆ ಇವರು ಖಚಿತಪಡಿಸಿರುತ್ತಾರೆ ಹಾಗೂ ಫಲಾನುಭವಿಯನ್ನು ಆರೋಪಿಯು ಆಯ್ಕೆ ಮಾಡಿರುವುದಿಲ್ಲ. ಸದರಿ ಫಲಾನುಭವಿಯನ್ನು ಈ ಹಿಂದೆಯೇ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಲಾಗಿದ್ದು, ಈ ಆಯ್ಕೆಯಲ್ಲಿ ಆರೋಪಿಯ ಯಾವುದೇ ಪಾತ್ರವಿರುವುದಿಲ್ಲ. ಆರೋಪಿಗಳ ಪಟ್ಟಿಯಲ್ಲಿ ಎರಡನೇ ಆರೋಪಿಯನ್ನು ಸೇರಿಸಿದ್ದು ಕೇವಲ ಸಂಬಂಧಿಕರ ನಡುವಿನ ಸ್ಥಳೀಯ ಪೈಪೋಟಿಯಾಗಿದ್ದು, ಅದರಲ್ಲಿ ಒಬ್ಬರು ಫಲಾನುಭವಿ ಹಾಗೂ ಮತ್ತೊಬ್ಬರು ದೂರುದಾರರು ಎಂದು ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ನ್ಯಾಯಾಲಯಕ್ಕೆ ತಮ್ಮ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಡೇಟಾ ಎಂಟ್ರಿ ಆಪರೇಟರ್ ಫಲಾನುಭವಿಯಾದ " ಪರಸಪ್ಪ ಬ.ಸರಸ್ವತಿ" ಎನ್ನುವವರ ಹೆಸರಿನ ಬದಲಾಗಿ "ಬಸಪ್ಪ ಪ.ಸರಸ್ವತಿ" ಎಂದು ತಪ್ಪಾಗಿ ನಮೂದಿಸಿರುವುದೇ ಒಂದು ಸಮಸ್ಯೆಯಾಗಿದ್ದು, "ಬಸಪ್ಪ ಪ.ಸರಸ್ವತಿ" ಎಂಬುವವರ ಹೆಸರನ್ನು ಫಲಾನುಭವಿಯ ಹೆಸರಿನೊಂದಿಗೆ ತಪ್ಪಾಗಿ ಗುರುತಿಸಲು ಕಾರಣವಾಯಿತು ಎಂದು ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಈ ನ್ಯಾಯಾಲಯಕ್ಕೆ ತಮ್ಮ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ಮೇಲ್ಕಂಡ ಎಲ್ಲ ಅಂಶಗಳನ್ವಯ ಆರೋಪಿಗಳ ವಿರುದ್ಧ ಪ್ರಕರಣವನ್ನು ಮುಂದುವರೆಸಲು ಯಾವುದೇ ಆಧಾರವಿಲ್ಲದ ಕಾರಣ ಸದರಿ ಪ್ರಕರಣವನ್ನು ವಜಾಗೊಳಿಸಲಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯನ್ನು ಅಮಾನತ್ತಿನಿಂದ ಮರುನಿಯುಕ್ತಿಗೊಳಿಸಿರದಿದ್ದಲ್ಲಿ ಮರುನಿಯುಕ್ತಿಗೊಳಿಸಬಹುದೆಂಬ ತೀರ್ಮಾನಕ್ಕೆ ಬರಲಾಯಿತು ಎಂದು ತಿಳಿಸುತ್ತಾ, ಮೇಲಿನ ಎಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಎದುರುದಾರರ ಮೇಲಿನ ಸದರಿ ಪ್ರಕರಣವನ್ನು ವಜಾಗೊಳಿಸಲಾಗಿದೆ ಎಂದು ಅಭಿಪ್ರಾಯಪಟ್ಟು ಪ್ರಾದೇಶಿಕ ಆಯುಕ್ತರು, ಬೆಳಗಾವಿ ರವರು ಮೇಲೆ ಓದಲಾದ ಕ್ರಮ ಸಂಖ್ಯೆ (6) ರಲ್ಲಿ ಸರ್ಕಾರಕ್ಕೆ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು ಸದರಿ ಪ್ರಕರಣದ ಬಗ್ಗೆ ಪರಿಶೀಲಿಸಲಾಗಿ, ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಶಿರೂರು ಗ್ರಾಮ ಪಂಚಾಯಿತಿಯ ಹಿಂದಿನ ಅಧ್ಯಕ್ಷರಾದ ಶ್ರೀಮತಿ ಯಲ್ಲವ್ವ ಬಸಪ್ಪ ನರ್ತಿ ಮತ್ತು ಶ್ರೀ ಇಸ್ಮಾಯಿಲ್‌ಸಾಬ್ ಎ. ರಾಜೇಖನವರ, ಹಿಂದಿನ ಸದಸ್ಯರು ಇವರುಗಳ ಮೇಲಿನ ಆರೋಪಗಳ ಬಗ್ಗೆ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ರವರು ವಿಚಾರಣೆ ನಡೆಸಿ, ನೀಡಿರುವ ವರದಿಯಲ್ಲಿ ಸದರಿ

ಫಲಾನುಭವಿಯನ್ನು ಈ ಹಿಂದೆಯೇ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಲಾಗಿದ್ದು, ಈ ಆಯ್ಕೆಯಲ್ಲಿ ಹಿಂದಿನ ಅಧ್ಯಕ್ಷರಾದ ಶ್ರೀಮತಿ ಯಲ್ಲವ್ವ ಬಸಪ್ಪ ನರ್ತಿ ಅವರ ಯಾವುದೇ ಪಾತ್ರವಿರುವುದಿಲ್ಲ ಹಾಗೂ ಆರೋಪಿಗಳ ಪಟ್ಟಿಯಲ್ಲಿ ಎರಡನೇ ಆರೋಪಿಯನ್ನಾಗಿ ಶ್ರೀ ಇಸ್ಮಾಯಿಲ್‌ಸಾಬ್ ಎ. ರಾಜೇಖಿನವರ, ಹಿಂದಿನ ಸದಸ್ಯರು ಇವರನ್ನು ಸೇರಿಸಿದ್ದು ಕೇವಲ ಸಂಬಂಧಿಕರ ನಡುವಿನ ಸ್ಥಳೀಯ ಪೈಪೋಟಿಯಾಗಿದ್ದು, ಅದರಲ್ಲಿ ಒಬ್ಬರು ಫಲಾನುಭವಿ ಹಾಗೂ ಮತ್ತೊಬ್ಬರು ದೂರುದಾರರು ಹಾಗೂ ಸದರಿ ಪ್ರಕರಣದಲ್ಲಿ ಡೇಟಾ ಎಂಟ್ರಿ ಆಪರೇಟರ್ ಫಲಾನುಭವಿಯಾದ "ಪರಸಪ್ಪ ಬ.ಸರಸ್ವತಿ" ಎನ್ನುವವರ ಬದಲಿಗೆ "ಬಸಪ್ಪ ಪ.ಸರಸ್ವತಿ" ಎಂದು ತಪ್ಪಾಗಿ ನಮೂದಿಸಿರುವುದೇ ಒಂದು ಸಮಸ್ಯೆಯಾಗಿದ್ದು, "ಬಸಪ್ಪ ಪ.ಸರಸ್ವತಿ" ಎಂಬುವವರ ಹೆಸರನ್ನು ಫಲಾನುಭವಿಯ ಹೆಸರಿನೊಂದಿಗೆ ತಪ್ಪಾಗಿ ಗುರುತಿಸಲು ಕಾರಣವಾಯಿತು ಎಂದು ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ತಿಳಿಸಿರುತ್ತಾರೆಂದು ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ರವರು ನೀಡಿರುವ ವರದಿಯನ್ನು ಒಪ್ಪಿ, ಶ್ರೀಮತಿ ಯಲ್ಲವ್ವ ಬಸಪ್ಪ ನರ್ತಿ, ಹಿಂದಿನ ಅಧ್ಯಕ್ಷರು ಮತ್ತು ಶ್ರೀ ಇಸ್ಮಾಯಿಲ್‌ಸಾಬ್ ಎ.ರಾಜೇಖಿನವರ, ಹಿಂದಿನ ಸದಸ್ಯರು, ಶಿರೂರು ಗ್ರಾಮ ಪಂಚಾಯಿತಿ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ ಇವರ ಮೇಲಿನ ಆರೋಪಗಳನ್ನು ಕೈಬಿಡಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಕೆಳಕಂಡ ಆದೇಶ

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 288 ಗ್ರಾಪಂಅ 2021, ಬೆಂಗಳೂರು, ದಿನಾಂಕ: 23.08.2021.**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಯಲ್ಲವ್ವ ಬಸಪ್ಪ ನರ್ತಿ, ಹಿಂದಿನ ಅಧ್ಯಕ್ಷರು ಮತ್ತು ಶ್ರೀ ಇಸ್ಮಾಯಿಲ್‌ಸಾಬ್ ಎ.ರಾಜೇಖಿನವರ, ಹಿಂದಿನ ಸದಸ್ಯರು, ಶಿರೂರು ಗ್ರಾಮ ಪಂಚಾಯಿತಿ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ ಇವರುಗಳ ವಿರುದ್ಧದ ಆರೋಪಗಳು ಸಾಬೀತಾಗಿರುವುದಿಲ್ಲವಾದ್ದರಿಂದ ಇವರನ್ನು ಸದರಿ ಪ್ರಕರಣದ ಆರೋಪದಿಂದ ಮುಕ್ತಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Chetna 23/8/21
(ಚೇತನ.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
23/08/21

**ಗೆ:**

1. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ.
2. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಕೆ.ಜಿ ರಸ್ತೆ, ಬೆಂಗಳೂರು.-09
3. ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಧಾರವಾಡ ಜಿಲ್ಲೆ.
4. ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ.
5. ಶ್ರೀಮತಿ ಯಲ್ಲಪ್ಪ ಬಸಪ್ಪ ನರ್ತಿ, ಹಿಂದಿನ ಅಧ್ಯಕ್ಷರು ಮತ್ತು ಶ್ರೀ ಇಸ್ಮಾಯಿಲ್‌ಸಾಬ್ ಎ.ರಾಜೇಖಿನವರ, ಹಿಂದಿನ ಸದಸ್ಯರು, ಶಿರೂರು ಗ್ರಾಮ ಪಂಚಾಯಿತಿ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ. (ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ ರವರ ಮುಖಾಂತರ)
6. ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ನಿರ್ದೇಶಕರು (ಪಂ.ರಾಜ್-1), ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.